# ‘ದರಿದ್ರದೇವೋ ಭವ’


## ಬಡತನ ನಿರ್ಮೂಲನೆಯನ್ನು ಕುರಿತು ಸ್ವಾಮಿ ವಿವೇಕಾನಂದರ ವಿಚಾರಗಳು

ವಿಜಯಕುಮಾರ

(ಆಗಸ್ಟ್ ೨೦೧೦ ರ ಸಂಚಿಕೆಯಿಂದ)

ಭೌತಿಕ ಪ್ರಗತಿಯನ್ನೂ ಒಳಗೊಂಡಿರುವ ಧಾರ್ಮಿಕ ಸಿದ್ಧಾಂತಗಳ ಪ್ರತಿಪಾದನೆಯಿಂದ ಹಾಗೂ ಐಹಿಕ ಸಮೃದ್ಧಿಗೂ ಅವಕಾಶವಿರುವ ಒಂದು ಸಾಮಾಜಿಕ ವಿನ್ಯಾಸದಲ್ಲಿ ಬಡವರಿಗೆ ಉದ್ಯೋಗಗಳು ಸೃಷ್ಟಿಯಾಗುವ ಸಂಭವ ಹೆಚ್ಚು. ಇದರಿಂದ ಅವರ ಜೀವನೋಪಾಯಕ್ಕೂ ಹೆಚ್ಚು ಅನುಕೂಲಗಳಿರುತ್ತವೆ. ಇದು ಸ್ವಾಮೀಜಿಯವರ ಅಭಿಪ್ರಾಯ. ಅದಕ್ಕೆಂದೇ ಅವರು, ತಮ್ಮ "ಕೊಲಂಬೊ ಇಂದ ಆಲ್ಮೋರಕೆ" ಎಂಬ ಪ್ರವಚನಗಳ ಮಾಲೆಯಲ್ಲಿ ಹೀಗೆ ಹೇಳುತ್ತಾರೆ:

"ಭೌತಿಕ ನಾಗರಿಕತೆಯ ಬಗ್ಗೆ ನಾವು ಬಹಳ ಲಘುವಾಗಿ ಮಾತನಾಡುತ್ತೇವೆ. ಆದರೆ ಕೆಲವೇ ಜನ ಆಧ್ಯಾತ್ಮಿಕ ಪಿಪಾಸುಗಳಿರುವ ಒಂದು ವ್ಯವಸ್ಥೆಯಲ್ಲಿ ಬಹು ಸಂಖ್ಯೆಯಲ್ಲಿ ಇರುವ ಬಡವರು ಹಸಿವಿನಿಂದ ಏಕೆ ತಾನೇ ನರಳಬೇಕು? ಭೌತಿಕ ನಾಗರಿಕತೆ, ಅಲ್ಲ, ಸ್ವಲ್ಪಮಟ್ಟಿಗಿನ ಸುಖೋಪಭೋಗಗಳೂ ಸಹ ಬಡವರಿಗಾಗಿ ಕೆಲಸ ಮತ್ತು ಉದ್ಯಮಗಳನ್ನು ಸೃಷ್ಟಿಸುವಲ್ಲಿ ಪ್ರೇರಕವಾಗುತ್ತವೆ."



**ವಿಜ್ಞಾನ ಮತ್ತು ತಾಂತ್ರಿಕತೆಯ ಬೆಳವಣಿಗೆ:** ಬಡತನದ ನಿರ್ಮೂಲನಕ್ಕೆ ಮೂಲಭೂತ ಆವಶ್ಯಕತೆಗಳಾದ ಆಹಾರಾದಿಗಳ ಉತ್ಪಾದನೆ, ಕೈಗಾರಿಕೋದ್ಯಮದ ಬೆಳವಣಿಗೆ ಹಾಗೂ ಪಾಶ್ಚಾತ್ಯರ ತಾಂತ್ರಿಕತೆ ಮತ್ತು ವಿಜ್ಞಾನವನ್ನು ನಮ್ಮ ಸಾಮಾಜಿಕ ಸನ್ನಿವೇಶಗಳಿಗೆ ಅಳವಡಿಸಿಕೊಳ್ಳುವ ಅಗತ್ಯವನ್ನು ಸ್ವಾಮಿ ವಿವೇಕಾನಂದರು ಒತ್ತಿ ಹೇಳುತ್ತಾರೆ. ಪಾಶ್ಚಾತ್ಯರ ತಾಂತ್ರಿಕ ಕೌಶಲಗಳನ್ನು ನಾವು ಕರಗತ ಮಾಡಿಕೊಳ್ಳಬೇಕಿದೆ ಎನ್ನುತ್ತಾರೆ. ಅದೇ ಉಸಿರಿನಲ್ಲಿ, "ನೀವು ನಮಗೆ ಹಸ್ತಕೌಶಲವನ್ನು ಕಲಿಸಿಕೊಡಿ. ನಾವು ನಿಮಗೆ ಆಧ್ಯಾತ್ಮಿಕತೆಯನ್ನು ತಿಳಿಸಿಕೊಡುತ್ತೇವೆ" ಎಂದು ಪಾಶ್ಚಾತ್ಯರಿಗೆ ಅವರು ಕರೆಕೊಡುತ್ತಾರೆ.

ವೈಜ್ಞಾನಿಕ ವಿಧಾನಗಳಿಂದ ಕೋಟ್ಯನುಕೋಟಿ ಜನರ ಆಹಾರದ ಆವಶ್ಯಕತೆಯನ್ನು ಪೂರೈಸುವಂಥ ದವಸಧಾನ್ಯಗಳ ಹೆಚ್ಚಿನ ಉತ್ಪಾದನೆ, ಪಾಶ್ಚಾತ್ಯ ವಿಜ್ಞಾನದ ನೆರವಿನಿಂದ ಹೊಸ ಹೊಸ ಆವಿಷ್ಕಾರ, ಕಷ್ಟಕರ ದುಡಿಮೆ – ಇವುಗಳ ಮೂಲಕ ನಮ್ಮ ಕೃಷಿರಂಗದಲ್ಲಿ ಕ್ರಾಂತಿಯನ್ನೇ ಉಂಟುಮಾಡಬಹುದೆಂಬ ಬಲವಾದ ನಂಬಿಕೆ ಸ್ವಾಮಿ ವಿವೇಕಾನಂದರದಾಗಿತ್ತು. ಭಾರತೀಯ ಸಾಮಾಜಿಕ ಪರಿಸ್ಥಿತಿಗಳಿಗೆ ಸರಿಹೊಂದುವಂಥ ಬೃಹತ್ ಉದ್ದಿಮೆಗಳಿಂದ ಕೈಗಾರಿಕೆಯ ಉದ್ಯಮದಲ್ಲೂ ಸಾಮರ್ಥ್ಯವನ್ನು ದ್ವಿಗುಣಗೊಳಿಸುವ ಆಶಯವನ್ನು ಅವರು ತಮ್ಮ ಚಿಂತನೆಗಳಲ್ಲಿ ವ್ಯಕ್ತಪಡಿಸುತ್ತಾರೆ.

**ತಾಂತ್ರಿಕ ತರಬೇತಿ ನೀಡುವ ಕೇಂದ್ರಗಳ ಹಾಗೂ ಕಾರ್ಯಾಗಾರಗಳ ಯೋಜನೆ:** ಈ ದೇಶದ ಕೃಷಿ ಮತ್ತು ಕೈಗಾರಿಕಾ ರಂಗಗಳಲ್ಲಿ ಆಧುನಿಕ ತಾಂತ್ರಿಕತೆಯನ್ನು ಅಳವಡಿಸಿಕೊಳ್ಳಲು ಜನತೆಗೆ ವಿಶೇಷ ತರಬೇತಿಯನ್ನು ನೀಡುವ ಉದ್ದೇಶಕ್ಕಾಗಿಯೇ ತರಬೇತಿ ಕೇಂದ್ರಗಳನ್ನೂ ಕಾರ್ಯಾಗಾರಗಳನ್ನೂ ನಡೆಸುವ ಮತ್ತು ಅಂತಹ ಕೇಂದ್ರಗಳನ್ನು ಅಂದಿನ ಮುಖ್ಯ ನಗರಗಳಾದ ಕೊಲ್ಕತಾ, ಮುಂಬೈ, ಮದ್ರಾಸ್ ಹಾಗೂ ದೆಹಲಿಗಳಲ್ಲಿ ತೆರೆಯುವ ವಿಚಾರವನ್ನು ಸ್ವಾಮೀಜಿಯವರ ಮಾತುಗಳಲ್ಲಿ ಕಾಣಬಹುದು. ತಮ್ಮಿಂದಲೇ ಸ್ಥಾಪಿತವಾದ ರಾಮಕೃಷ್ಣ ಮಿಷನ್, ಅಧ್ಯಾತ್ಮ ಮತ್ತು ತಾತ್ತ್ವಿಕ ಚಿಂತನೆಗಳ ಅಧ್ಯಯನದ ಪೀಠ ಮಾತ್ರವಾಗಿರದೆ, ತಾಂತ್ರಿಕ ತರಬೇತಿಯ ಕೇಂದ್ರವೂ ಆಗಬೇಕೆಂಬ ತಮ್ಮ ಆಶಯವನ್ನು ಅವರು ವ್ಯಕ್ತಪಡಿಸುತ್ತಾರೆ. ಈ ಅಂಶವನ್ನು ೧೮೯೭ ರ ಮೇ ೧ ರಂದು ಆರಂಭಗೊಂಡ ರಾಮಕೃಷ್ಣ ಮಿಷನ್ನಿನ ನಿರ್ಣಯಗಳಲ್ಲಿ ನಾವು ಗುರುತಿಸಬಹುದು. ರಾಮಕೃಷ್ಣ ಮಿಷನ್ನಿನ ಉದ್ದೇಶಗಳನ್ನು ನಿರೂಪಿಸುತ್ತಾ, ಜನಸಾಮಾನ್ಯರ ಭೌತಿಕ ಮತ್ತು ಆಧ್ಯಾತ್ಮಿಕ

ಕಲ್ಯಾಣಕ್ಕಾಗಿ, ವಿಜ್ಞಾನ ಹಾಗೂ ತಾಂತ್ರಿಕ ಜ್ಞಾನವನ್ನು ನೀಡುವ ಬೋಧಕರ ತರಬೇತಿ ಹಾಗೂ ಕೈಗಾರಿಕೆಗಳಿಗೆ ಪ್ರೋತ್ಸಾಹ ನೀಡುವ ಇರಾದೆಯನ್ನೂ ಆ ನಿರ್ಣಯಗಳಲ್ಲಿ ಕಾಣಬಹುದು. ಇಂತಹ ತರಬೇತಿಯಿಂದ ದೇಶವು ಆರ್ಥಿಕ ಸ್ವಾವಲಂಬನೆಯನ್ನು ಸಾಧಿಸಬಹುದು ಎನ್ನುವುದೂ ಇವುಗಳಲ್ಲಿ ವ್ಯಕ್ತವಾಗಿದೆ.

ಸ್ವಾಮಿ ವಿವೇಕಾನಂದರು ಅಮೆರಿಕೆಗೆ ಪ್ರಯಾಣ ಮಾಡುತ್ತಿದ್ದಾಗ, ಜೆಮ್‌ಷೆಡ್‌ಜಿ ಟಾಟಾರವರೂ ಅದೇ ಹಡಗಿನಲ್ಲಿ ಯಾವುದೋ ಕಾರ್ಯನಿಮಿತ್ತ ಪ್ರಯಾಣಿಸುತ್ತಿದ್ದರು. ಅವರೀರ್ವರ ನಡುವಿನ ಮಾತುಕತೆಯ ಸಂದರ್ಭದಲ್ಲಿ ಸ್ವಾಮೀಜಿಯವರು, "ನೀವೇ ಏತಕ್ಕೆ ಬೆಂಕಿಕಡ್ಡಿಗಳನ್ನು ಉತ್ಪಾದಿಸುವ ಕಾರ್ಖಾನೆಯನ್ನು ತೆರೆಯಬಾರದು? ಜಪಾನಿನ ಉತ್ಪಾದನೆಯನ್ನು ಇಲ್ಲೇಕೆ ಮಾರಬೇಕು?" ಎಂದರು. ಇದಾಗಿ ಐದು ವರ್ಷಗಳ ನಂತರ, ಜೆಮ್‌ಷೆಡ್‌ಜಿ ಟಾಟಾರವರು ವೈಜ್ಞಾನಿಕ ಸ್ನಾತಕೋತ್ತರ ಸಂಶೋಧನಾ ಕೇಂದ್ರವೊಂದನ್ನು ಸ್ಥಾಪಿಸುವ ಹಾಗೂ ತಮ್ಮ ಸ್ವಂತ ಗಳಿಕೆಯಾದ ೩೦ ಲಕ್ಷ ರೂಪಾಯಿಗಳನ್ನು ಆ ಉದ್ದೇಶಕ್ಕಾಗಿ ಮೀಸಲಿಡುವ ತಮ್ಮ ಸಂಕಲ್ಪವನ್ನು ತಿಳಿಸುತ್ತಾ, ಸ್ವಾಮೀಜಿಯವರಿಗೆ ೨೩.೧೧.೧೮೯೮ರಂದು ಒಂದು ಪತ್ರವನ್ನು ಬರೆಯುತ್ತಾರೆ. ಆ ಮೂಲಕ ತಮ್ಮ ಈ ಯೋಜನೆಗೆ ಅವರ ಪ್ರೋತ್ಸಾಹ ಕೋರುತ್ತಾರೆ. ಅದಕ್ಕುತ್ತರವಾಗಿ ರಾಮಕೃಷ್ಣ ಮಿಷನ್ನಿನ ಅಧಿಕೃತ ಮಾಸಪತ್ರಿಕೆಯಾದ 'ಪ್ರಬುದ್ಧಭಾರತ'ದಲ್ಲಿ, ಬಹುಶಃ ಸ್ವಾಮೀಜಿಯವರ ಸಲಹೆಯ ಮೇರೆಗೆ, ಒಂದು ಮನವಿಯ ರೂಪದಲ್ಲಿ ಒಂದು ಸುಂದರ ಸಂಪಾದಕೀಯ ಮೂಡಿಬರುತ್ತದೆ. ಅದು ಹೀಗೆ ಹೇಳುತ್ತದೆ: "ಭಾರತವು ಉಳಿದು ಮುನ್ನಡೆ ಸಾಧಿಸಬೇಕಾದರೆ, ಪ್ರಪಂಚದ ರಾಷ್ಟ್ರಗಳ ಒಕ್ಕೂಟದಲ್ಲಿ ತನ್ನದೊಂದು ಸ್ಥಾನವನ್ನು ಗಳಿಸಬೇಕಾದರೆ, ಮೊಟ್ಟಮೊದಲಾಗಿ ತನ್ನ ಆಹಾರದ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು. ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಈ ಸಮಸ್ಯೆಗೆ ಇರುವ ಏಕೈಕ ಪರಿಹಾರವೆಂದರೆ ವೈಜ್ಞಾನಿಕ ವಿಧಾನಗಳು. ಇವುಗಳ ನೆರವಿನಿಂದ ಬದುಕಿನ ನಿರ್ವಹಣೆ ಸುಗಮವಾಗಬೇಕು."

ಬಡತನದ ಸಮಸ್ಯೆಯು ಈ ರಾಷ್ಟ್ರದ ಅಳಿವು–ಉಳಿವಿನ ಸಮಸ್ಯೆಯಾಗಿ ಸ್ವಾಮೀಜಿಯವರನ್ನು ಕಾಡಿರುವುದನ್ನೂ ಮತ್ತು ಅದರ ನಿರ್ಮೂಲನಕ್ಕಾಗಿ ಅವರು ಸ್ವಾವಲಂಬನೆಯ ಒಂದು ದಿಟ್ಟವಾದ ಮಹಾನ್ ಯೋಜನೆಯನ್ನೇ ರೂಪಿಸಿರುವುದನ್ನೂ ನಾವು ಅವರ ಚಿಂತನೆಗಳಲ್ಲಿ ಗಮನಿಸಬಹುದು. ನಿಧಾನವಾಗಿಯಾದರೂ ಸರಿಯೆ, ಇಂತಹ ಒಂದು ಯೋಜನೆ ಕಾರ್ಯಗತವಾದಾಗ, ಬಂಡವಾಳಶಾಹಿಗಳು, ದಳ್ಳಾಳಿಗಳು, ಸಾಲಗಳ ಸಂಕೋಲೆಯಲ್ಲಿ ಬಡವರನ್ನು ಸಿಲುಕಿಸುವ ಶ್ರೀಮಂತರು – ಇವರುಗಳಿಂದ ಮುಕ್ತವಾದ ಕಾರ್ಮಿಕ ವರ್ಗವು, ಈ ದೇಶದ ಸಂಪನ್ಮೂಲಗಳನ್ನು ನಿರ್ವಹಿಸುತ್ತಾ, ಸಂಪತ್ತಿನ ಉತ್ಪಾದನೆ ಮತ್ತು ವಿತರಣೆಯ ಮುಂಚೂಣಿಯಲ್ಲಿರುತ್ತದೆ. ಇದಕ್ಕೆ ಅತ್ಯಂತ ಅವಶ್ಯಕವಾದ ಅಂಶವೆಂದರೆ, ದೇಶದಲ್ಲಿ ಜನಸಾಧಾರಣರಲ್ಲಿ ಹೆಚ್ಚುಹೆಚ್ಚಾಗಿ ವಿದ್ಯೆ ಮತ್ತು ಅರಿವು ಹರಡುವಂತೆ ಮಾಡುವುದು. ಸರಿಯಾದ ವಿದ್ಯೆಯು ಮನುಷ್ಯನ ಬದುಕನ್ನು ರೂಪಿಸುವುದರೊಂದಿಗೇ, ಅವನ ಜೀವನಮಟ್ಟವನ್ನೂ ಸುಧಾರಿಸುತ್ತದೆ; ಸುತ್ತಮುತ್ತಲ ಪರಿಸ್ಥಿತಿಯ ಬಗ್ಗೆ ಪರಿಜ್ಞಾನವನ್ನು ನೀಡಿ ಅವನನ್ನು ಜಾಗೃತಿಗೊಳಿಸುತ್ತದೆ. ಆ ಮೂಲಕ ಬಡ ಜನತೆಯು ತಮ್ಮ ಚರಿತ್ರೆಯನ್ನು ಮತ್ತು ಭವಿಷ್ಯವನ್ನು ತಾವೇ ಬರೆಯುವಂತಾಗುತ್ತದೆ.

> **ಈ ಜನರೇ ನಿಮ್ಮ ದೇವರಾಗಲಿ. ಯಾವಾಗಲೂ ಅವರಿಗೆ ಕೆಲಸ ಮಾಡಿ, ಅವರಿಗಾಗಿ ಆಲೋಚಿಸಿ, ಅವರಿಗಾಗಿ ಪ್ರಾರ್ಥನೆ ಮಾಡಿ. ದೇವರು ದಾರಿ ತೋರುವನು. ಯಾರ ಹೃದಯವು ದೀನದಲಿತರಿಗೆ ಮರುಗುವುದೋ ಆ ಮನುಷ್ಯನನ್ನು ನಾನು ಮಹಾತ್ಮನೆಂದು ಕರೆಯುತ್ತೇನೆ. ಅಲ್ಲದೆ ಇದ್ದರೆ ಅವನೊಬ್ಬ ದುರಾತ್ಮ. ನಾವೆಲ್ಲ ಅವರ ಕಲ್ಯಾಣಕ್ಕಾಗಿ ಒಟ್ಟುಗೂಡಿ ಪ್ರಾರ್ಥಿಸೋಣ.**
>
> –ಸ್ವಾಮಿ ವಿವೇಕಾನಂದ

ಸಹಸ್ರಾರು ವರ್ಷಗಳಿಂದ ದಾರಿದ್ರ್ಯ, ಅಜ್ಞಾನ ಮತ್ತು ಶೋಷಣೆಗಳ ಕತ್ತಲ ಕೂಪದಲ್ಲಿ ತೊಳಲಾಡುತ್ತಿರುವ ಉಪೇಕ್ಷಿತ ವರ್ಗಗಳ ಉನ್ನತಿಗಾಗಿ ಸ್ವಾಮಿ ವಿವೇಕಾನಂದರು ನೀಡಿರುವ ಮೌಲ್ಯಾತ್ಮಕ ಚಿಂತನೆಗಳು, ಸಾಮಾಜಿಕ ಸೇವಾಕರ್ತರಿಗೊಂದು ಸುಭದ್ರ ರಚನಾತ್ಮಕ ಕಾರ್ಯಸೂಚಿಯನ್ನು ಒದಗಿಸುತ್ತವೆ. ಇದರಿಂದ ರೂಪಿತಗೊಂಡ ಕಾರ್ಯಯೋಜನೆಗಳು ಹಲವಾರು. ರಾಮಕೃಷ್ಣ ಮಿಷನ್ನಿನ ಅನೇಕ ಬರಪರಿಹಾರ ಕಾರ್ಯಗಳಾಗಲಿ, ಕೈಗಾರಿಕಾ ತರಬೇತಿ ಕಾರ್ಯಾಗಾರಗಳಾಗಲಿ, ಗುಡಿಕೈಗಾರಿಕೆಯ ಮಾದರಿಗಳಾಗಲಿ, ಯುವಜನತೆಯ ಶಿಬಿರಗಳಾಗಲಿ, ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳ ಹಿನ್ನೆಲೆಯಲ್ಲಿ ಇರುವ ದೃಢ ತಾತ್ತ್ವಿಕ ನೆಲೆಯನ್ನು ಸ್ವಾಮಿ ವಿವೇಕಾನಂದರ ಚಿಂತನೆಗಳಲ್ಲಿ ಕಾಣಬಹುದು.

ಅಷ್ಟೇ ಅಲ್ಲದೆ, ಸ್ವಾಮೀಜಿಯವರ ಅಧ್ಯಯನದಿಂದ ಸ್ಫೂರ್ತಿಗೊಂಡು, ರಾಮಕೃಷ್ಣ ಮಿಷನ್ನಿನ ಕಾರ್ಯವೈಖರಿಯಿಂದ ಪ್ರೇರಣೆಯನ್ನು ಪಡೆದು, ಸಾವಿರಾರು ಸೇವಾಸಂಸ್ಥೆಗಳು ಬಡತನದ ನಿರ್ಮೂಲನೆಗೆ ತಮ್ಮದೇ ಆದ ವಿಶಿಷ್ಟ ಕಾರ್ಯಯೋಜನೆಗಳನ್ನು ಹಮ್ಮಿಕೊಂಡಿವೆ.

ಬಡತನದಂಥ ಬೃಹತ್ ಸಮಸ್ಯೆಯ ನಿವಾರಣೆಯಲ್ಲಿ ಇಂತಹ ಪ್ರಯತ್ನಗಳು ಎಷ್ಟೇ ಅಲ್ಪವಾಗಿರಬಹುದು. ಆದರೂ, ಭಾರತದ ಬಡತನದ ನಿರ್ಮೂಲನೆಯಲ್ಲಿ, ಸಾಮಾಜಿಕ ಪರಿವರ್ತನೆಯಲ್ಲಿ ಅವೆಲ್ಲವೂ, ಸ್ವಾಮೀಜಿಯವರ ಚಿಂತನೆಗಳು ಮುಂಬರುವ ದಿನಗಳಲ್ಲಿ ವಹಿಸುವ ಮಹತ್ವದ ಪಾತ್ರದ ಒಂದು ದಿಗ್ದರ್ಶನವನ್ನು ಮಾಡಿಸುತ್ತವೆ ಎನ್ನುವುದಂತೂ ನಿಸ್ಸಂದೇಹವಾದುದು.

★

# ರಾಮಾಯಣದಲ್ಲಿ 'ನೀತಿ'

ಡಾ. ಕೆ. ಎಲ್. ಪ್ರಸನ್ನಾಕ್ಷಿ

**ರಾಮಾಯಣವು ನೀತಿಶಾಸ್ತ್ರ. ಅದರಲ್ಲಿ ಬರುವ ಹಲವು ಪಾತ್ರಗಳು ನೀತಿಯ ಹಲವು ಪ್ರಕಾರಗಳಿಗೆ ಆದರ್ಶವಾಗಿ ನಿಲ್ಲುವಂಥವು. ಇದರ ಸೋದಾಹರಣ ಪರಿಚಯವನ್ನು ಮನೋಜ್ಞವಾಗಿ ಮಾಡಿಕೊಟ್ಟಿರುವ ಲೇಖಕಿ ನಿವೃತ್ತ ಕಾಲೇಜು ಪ್ರಾಂಶುಪಾಲರು; ಸಂಸ್ಕೃತ ವಿದ್ವಾಂಸರು; ಮೈಸೂರು ಆಶ್ರಮದ ಭಕ್ತರು; 'ವಿವೇಕಪ್ರಭ' ದ ಸ್ವಯಂಸೇವಕರು.**



ರವಿವರ್ಮನ ಪ್ರಸಿದ್ಧ ಕಲಾಕೃತಿ

**ರಾ**ಮನು ನಡೆದ ದಾರಿಯನ್ನು ಪ್ರಧಾನವಾಗಿ ಚಿತ್ರಿಸುವುದರ ಮೂಲಕ ವಾಲ್ಮೀಕಿಯ ಮಹಾಕಾವ್ಯವು 'ರಾಮಾಯಣ' ಎನ್ನಿಸಿದೆ. ವಿಭಿನ್ನ ಪಾತ್ರಗಳ ವಿವಿಧ ನಡೆಗಳ ಆದರ್ಶಗಳು ರಾಮಾಯಣದಲ್ಲಿವೆ. ಈ ಎಲ್ಲಾ ಪಾತ್ರಗಳು ಪ್ರಧಾನ ನಾಯಕನಾದ ರಾಮನಿಗೆ, ಅವನ ನಡೆಗೆ ಪೂರಕ ಮಾತ್ರ. ಆದುದರಿಂದ ಇದು ಸಕಲ ವಿಧದಿಂದಲೂ 'ರಾಮಾಯಣ'ವೇ ಎಂದರೆ ತಪ್ಪಾಗಲಾರದು.

'ನೀತಿ' ಎಂದರೆ ('ಣೀಞ್' ಪ್ರಾಪಣೇ) 'ಹೊಂದುವಂತೆ ಮಾಡುವುದು'. ಏನನ್ನು ಹೊಂದುವುದು? ಪ್ರತಿಯೊಂದು ಜೀವಿಗೂ ಹೊಂದಬೇಕಾದ, ಸೇರಬೇಕಾದ ಒಂದು ಗುರಿಯಿರುತ್ತದೆ. ಅದೆಂದರೆ, ವಿದ್ಯೆ ಗಳಿಸುವುದು, ಕಲೆಗಳಲ್ಲಿ ನೈಪುಣ್ಯ ಪಡೆಯುವುದು, ಉತ್ಕೃಷ್ಟ ಉದ್ಯೋಗ ಪಡೆದುಕೊಳ್ಳುವುದು, ಆಟೋಟಗಳಲ್ಲಿ ಪ್ರಾವೀಣ್ಯ ಗಳಿಸುವುದು ಇತ್ಯಾದಿ. ಈ ಗುರಿಯನ್ನು ಹೊಂದಲು ಬೇಕಾದ ಸಾಧನೆ, ಸಲಕರಣೆ, ಉಪಾಯಗಳೂ 'ನೀತಿ' ಎನ್ನಿಸಿಕೊಳ್ಳುತ್ತವೆ. ಎಲ್ಲ ಜೀವಿಗಳಿಗೂ ಸಮಾನವಾದ ಗುರಿಯೆಂದರೆ ಬದುಕು ನಡೆಸುವುದು. ಅದನ್ನು ಅವರು ಇಷ್ಟಬಂದ ಹಾಗೆ ನಡೆಸಿದರೆ, ವ್ಯವಹರಿಸತೊಡಗಿದರೆ! ಅಬ್ಬಾ! ಆಗ ಪ್ರಪಂಚ ಹೇಗಿರಬಹುದೆಂಬುದನ್ನು ಕಲ್ಪನೆ ಮಾಡಿಕೊಳ್ಳಲೂ ಸಾಧ್ಯವಿಲ್ಲ. ಪ್ರಕೃತಿ ಕೂಡ ಬೇಕೆಂದ ಹಾಗೆ ಮಳೆ, ಬೆಳೆ, ಬಿಸಿಲುಗಳನ್ನು ಉಂಟುಮಾಡಿದರೆ, ಯಾವ ಜೀವಿ ತಾನೆ ಈ ಬ್ರಹ್ಮಾಂಡದ ಮೇಲೆ ಉಳಿಯಬಲ್ಲ? ಅದಕ್ಕಾಗಿ ಒಂದು ವ್ಯವಸ್ಥೆ ಬೇಕಾಗುತ್ತದೆ. ಅದೇ 'ನೀತಿ' ಅನ್ನಿಸಿಕೊಳ್ಳುತ್ತದೆ. ಇಂಥ ವ್ಯವಸ್ಥಿತವಾದ, ನೀತಿಪೂರ್ಣ ನಡೆಯು ಕುಟುಂಬ, ಸಮಾಜ, ರಾಷ್ಟ್ರ – ಒಟ್ಟು ಇಡೀ ಪ್ರಪಂಚದ ಹಿತವನ್ನು ಕಾಯುತ್ತದೆ. ಈ ಬಗೆಯ ಲೋಕಹಿತದ ನಡೆ ರಾಮಾಯಣದಲ್ಲಿ ಆದ್ಯಂತವಾಗಿ ಎಲ್ಲಾ ಹಂತದಲ್ಲೂ, ಎಲ್ಲಾ ವ್ಯಕ್ತಿಗಳಲ್ಲೂ, ಹೆಜ್ಜೆಹೆಜ್ಜೆಯಲ್ಲೂ ಬಿಂಬಿತವಾಗಿದೆ.

ಸ್ವಂತ ಮಗನಷ್ಟೇ ಸಹಜವಾದ ಪ್ರೀತಿಯನ್ನು ರಾಮನಲ್ಲಿಯೂ ಹೊಂದಿದ್ದ ಕೈಕೇಯಿ ರಾಮನ ಪಟ್ಟಾಭಿಷೇಕದ ಸಮಾಚಾರ ಕೇಳಿ ಹಿಗ್ಗುತ್ತಾಳೆ, ನಲಿಯುತ್ತಾಳೆ, ಆನಂದೋನ್ಮತ್ತಳಾಗುತ್ತಾಳೆ. ಸುದ್ದಿ ತಂದ ಮಂಥರೆಗೆ ತನ್ನ ಕುತ್ತಿಗೆಯಲ್ಲಿದ್ದ ಅಮೂಲ್ಯವಾದ ರತ್ನಹಾರವನ್ನು ಉಡುಗೊರೆಯಾಗಿ ಕೊಡುತ್ತಾಳೆ. ಆದರೆ ಮಂಥರೆ ಬಿತ್ತಿದ ವಿಷಬೀಜದ ಪ್ರಭಾವಕ್ಕೆ ಮೆಲ್ಲಮೆಲ್ಲನೆ ಒಳಗಾಗಿ ರಾಮನನ್ನು ಕಾಡಿಗೆ ಕಳುಹಿಸುವ ನಿರ್ಣಯಕ್ಕೆ ಬರುತ್ತಾಳೆ. ದಶರಥನ ಬಳಿ ಭರತನಿಗೆ ಪಟ್ಟವನ್ನೂ ರಾಮನಿಗೆ ವನವಾಸವನ್ನೂ ಬೇಡುತ್ತಾಳೆ. ಯೌವರಾಜ್ಯ ಪಟ್ಟಾಭಿಷೇಕ ಮಹೋತ್ಸವಕ್ಕೆ ಸಂಭ್ರಮ ಸಡಗರದಿಂದ ಸಿದ್ಧವಾಗಿದ್ದ ರಾಮ ಸಂತೋಷದಿಂದಲೇ ಕಾಡಿಗೆ ಹೊರಡುತ್ತಾನೆ. ಕುಟುಂಬದ ಹಿತಕ್ಕಾಗಿ, ಕೈಕೇಯಿಯ ತೃಪ್ತಿಗಾಗಿ ರಾಜ್ಯತ್ಯಾಗ ಮಾಡುತ್ತಾನೆ. ಕಾಸಗಲ ಭೂಮಿಗಾಗಿ, ಕಿಲುಬು ಕಾಸಿಗಾಗಿ ಹೋರಾಡಿ, ಬಡಿದಾಡಿ ಕುಟುಂಬಗಳ ಘನತೆಯನ್ನು ಬೀದಿಪಾಲು ಮಾಡುವ ಜನತೆ ಗಮನಿಸಬೇಕಾದ ಅಂಶ ಇದು. ರಾಮ ಯಾವ ನ್ಯಾಯಾಲಯಕ್ಕೂ ಮೊರೆಹೋಗಲಿಲ್ಲ, ದಾವೆ ಹಾಕಲಿಲ್ಲ, ಕೈಕೇಯಿಯ ಮೇಲೆ ಕೈಮಾಡಲಿಲ್ಲ, ತಂದೆಯನ್ನು ನಿಂದಿಸಲಿಲ್ಲ. ತಮ್ಮ ಲಕ್ಷ್ಮಣ ತನ್ನ ಮೇಲಿನ ವಿಶೇಷವಾದ ಅಭಿಮಾನ ಪ್ರೀತಿಗಳಿಂದ, ವನವಾಸವನ್ನು ವಿಧಿಸಿದ ದಶರಥನನ್ನು ನಿಂದಿಸಿದಾಗ, ಅವನಿಗೇ ಹೀಗೆ ತಿಳಿವಳಿಕೆ ಹೇಳುತ್ತಾನೆ: **'ಜಾನಾಮಿ ಮಯಿ ಸ್ನೇಹಮನುತ್ತಮಮ್'** – "ನನ್ನಲ್ಲಿ ನಿನಗಿರುವ ಅಸಾಧಾರಣವಾದ ಪ್ರೀತಿಯ ಬಗ್ಗೆ ನನಗೆ ತಿಳಿದಿದೆ, ಆದರೆ

ತಂದೆ–ತಾಯಿ–ಗುರು–ಹಿರಿಯರ ನಿಂದೆ ಯಾರಿಗೂ ಎಂದಿಗೂ ಶ್ರೇಯಸ್ಕರವಲ್ಲ. ತಂದೆಯ ಮಾತಿನ ಪ್ರಕಾರ ನಡೆದುಕೊಂಡವನು ಎಂದಿಗೂ ನಾಶವನ್ನು ಹೊಂದುವುದಿಲ್ಲ. ಆದುದರಿಂದ ಧರ್ಮವನ್ನು ಆಶ್ರಯಿಸು, ಕಠೋರತೆಯನ್ನಲ್ಲ" (*ಅಯೋಧ್ಯಾಕಾಂಡ, ೨೧. ೩೯–೪೩*) ಎಂದು ತಮ್ಮನನ್ನು ಸಮಾಧಾನಗೊಳಿಸುತ್ತಾನೆ.

ತಾಯಿ ಕೌಸಲ್ಯೆಯು ರಾಮನಿಲ್ಲದೆ ಜೀವಿಸಲಾರೆನೆಂದೂ, ಅವನನ್ನು ಅನುಸರಿಸಿ ಕಾಡಿಗೆ ಬರುವುದಾಗಿಯೂ ಹಟ ಹಿಡಿದಳು. ಆಗ ರಾಮನು, ಮಗನ ಮೇಲಿನ ಮೋಹದಿಂದ ಅವಳು ಉಪೇಕ್ಷೆ ಮಾಡಿದ್ದ, ಪತ್ನಿಯಾದವಳ ಕರ್ತವ್ಯಗಳನ್ನು ಅವಳಿಗೆ ನೆನಪಿಸಿಕೊಡುತ್ತಾನೆ. ಹೀಗೆ, ಮುರಿದು ಚೂರಾಗಿ ಹೋಗುತ್ತಿದ್ದ ಕುಟುಂಬವನ್ನು ಎತ್ತಿನಿಲ್ಲಿಸಲು ಪ್ರಯತ್ನಿಸುತ್ತಾನೆ. ರಾಮನಿಗೆ ಮಾತ್ರ ವನವಾಸ ವಿಧಿಸಿದ್ದರೂ, ಲಕ್ಷ್ಮಣನ ತಾಯಿ ಸುಮಿತ್ರೆ, ಅವನ ರಕ್ಷಣೆಗಾಗಿ ಹೊರಟ ತನ್ನ ಮಗ ಲಕ್ಷ್ಮಣನಿಗೆ, ಕಾಡನ್ನು ಅಯೋಧ್ಯೆಯೆಂದೂ ರಾಮನನ್ನು ದಶರಥನೆಂದೂ ಸೀತೆಯನ್ನು ತಾನೆಂದು (ತಾಯಿಯೆಂದು) ತಿಳಿಯಬೇಕೆಂದು ತಿಳಿಹೇಳಿ ಸಂತೋಷದಿಂದ ಮಗನನ್ನು ಕಳುಹಿಸಿಕೊಡುತ್ತಾಳೆ (*ಅಯೋಧ್ಯಾಕಾಂಡ ೪೦.೯*). ಸುಮಿತ್ರೆಯದು ಎಂಥ ಔದಾರ್ಯ!

ಲಕ್ಷ್ಮಣ ತಾಯಿಯ ಮಾತನ್ನು ಚಾಚೂ ತಪ್ಪದೆ ಅನುಸರಿಸುತ್ತಾನೆ; ಅಣ್ಣ ಅತ್ತಿಗೆಯರ ಸೇವೆ ಮತ್ತು ರಕ್ಷಣೆಯನ್ನು, ಅವರ ಮನವರಿತು, ಸಂತೃಪ್ತಿ ಸಂತೋಷಗಳಿಂದ ಮಾಡುತ್ತಾನೆ. ಎಂತಹ ತ್ಯಾಗ ಮತ್ತು ಮಾತಿಗೆ ಬದ್ಧತೆ! ಮುಂದೆ ವಾನರರು ತಮಗೆ ದೊರೆತ ಸೀರೆಯ ಅಂಚಿನಲ್ಲಿ ಕಟ್ಟಿದ್ದ ಆಭರಣಗಳನ್ನು ತೋರಿಸಿದಾಗ, ರಾಮನು ಅವನ್ನು ಗುರುತಿಸಲು ಲಕ್ಷ್ಮಣನನ್ನು ಕೇಳಿಕೊಳ್ಳುತ್ತಾನೆ. ಆಗ ಅವನು ಆಡುವ ಮಾತು ಕೂಡ ಲಕ್ಷ್ಮಣನಲ್ಲಿ ನಮಗೆ ಗೌರವ ಆದರಗಳನ್ನು ಮೂಡಿಸುತ್ತದೆ. **ನಾಹಂ ಜಾನಾಮಿ ಕೇಯೂರೇ ನ ಚಾಪಿ ಕರ್ಣಕುಂಡಲೇ । ನೂಪುರೇ ತ್ವಭಿಜಾನಾಮಿ ನಿತ್ಯಂ ಪಾದಾಭಿವಂದನಾತ್** ॥ (*ಕಿಷ್ಕಿಂಧಾಕಾಂಡ, ೬. ೨೨*) "ನನಗೆ ಕೇಯೂರಹಾರವಾಗಲಿ, ಕರ್ಣಕುಂಡಲಗಳಾಗಲಿ ಗೊತ್ತಿಲ್ಲ. (ತಾಯಿಯೆಂದು ಭಾವಿಸಿ) ಪ್ರತಿದಿನ ಆಕೆಗೆ ನಮಸ್ಕರಿಸುತ್ತಿದ್ದುದರಿಂದ ಕಾಲಂದುಗೆಗಳನ್ನು ಮಾತ್ರ ಗುರುತಿಸಬಲ್ಲೆ" ಎನ್ನುತ್ತಾನೆ ಅವನು.

ಸೋದರಮಾವನ ಮನೆಯಲ್ಲಿದ್ದ ಭರತನನ್ನು ಯೌವ ರಾಜ್ಯಾಭಿಷೇಕಕ್ಕಾಗಿ, ಪಿತೃಸಂಸ್ಕಾರಕ್ಕಾಗಿ ಕರೆಸುತ್ತಾರೆ. ಬಂದ ಭರತ ಅಮ್ಮನನ್ನು, "ಎಂತಹ ಕೆಲಸ ಮಾಡಿದೆ? ಅವನು ನಮ್ಮಣ್ಣನಲ್ಲವೆ? ವೃಥಾ ಅವನನ್ನು ಕಾಡಿಗೆ ಅಟ್ಟಿದೆಯಲ್ಲಾ?" ಎಂದು ಗೋಳಾಡುತ್ತಾನೆ. ತಾನಾಗಿ ಒದಗಿದ ರಾಜ್ಯಭೋಗಗಳಿಂದ (ಇದಕ್ಕಾಗಿ ಎಂತೆಂಥ ಕೂಟ ವ್ಯವಹಾರ ನಡೆಯುತ್ತದೆ!) ಭರತ ಆನಂದಿಸಲಿಲ್ಲ; ಅಣ್ಣನಿಗೆ ಸೇರಬೇಕಾದ ವಸ್ತು ತನಗೂ ಬೇಡವೆಂದ. ಅಣ್ಣನನ್ನು ಕಾಡಿನಿಂದ ಹಿಂತಿರುಗಿ ಕರೆದುಕೊಂಡು ಬಂದು ರಾಜ್ಯವನ್ನು ಅವನಿಗೇ ಒಪ್ಪಿಸಲು ಇಚ್ಛಿಸಿದ. ಕಾಡಿಗೆ ಬಂದ ಭರತನನ್ನು ತಪ್ಪಾಗಿ ಅರ್ಥ ಮಾಡಿಕೊಂಡು ಲಕ್ಷ್ಮಣನು, "ಅವನನ್ನು ಸೇನಾಸಮೇತ ನಾಶ ಮಾಡುತ್ತೇನೆ, ರಾಮನು ಅಯೋಧ್ಯೆಗೆ ರಾಜನಾಗಲಿ" ಎನ್ನುತ್ತಾನೆ. ಆಗ ಲಕ್ಷ್ಮಣನನ್ನು ರಾಮನು ಹೀಗೆ ಸಮಾಧಾನಪಡಿಸುತ್ತಾನೆ: "ಭರತನನ್ನು ಕೊಂದು ಪಡೆದ, ಅಪವಾದದಿಂದೊಡಗೂಡಿದ ರಾಜ್ಯದಿಂದ ಏನು ಪ್ರಯೋಜನ? ಬಂಧುಬಾಂಧವರ ನಾಶದಿಂದ ಲಭಿಸುವ ದ್ರವ್ಯ ವಿಷಮಿಶ್ರಿತ ಆಹಾರದಂತೆ. ಅದು ನನಗೆ ಬೇಡ. ಧರ್ಮ ಅರ್ಥ ಕಾಮ ಯಾವುದನ್ನು ನಾನು ಬಯಸಿದರೂ ಅದು ನಿಮಗಾಗಿ, ನಿಮ್ಮ ಸುಖಕ್ಕಾಗಿ. ನೀವಿಲ್ಲದೆ ನನಗೆ ಇಂದ್ರಪದವಿ ದೊರೆತರೂ ಅದು ಬೇಡ." ಅಷ್ಟೇ ಅಲ್ಲದೆ ಭರತನ ಹಿರಿತನವನ್ನೂ, ಔದಾರ್ಯ ಗುಣಗಳನ್ನೂ ಕೊಂಡಾಡಿ, **ಸ್ನೇಹೇನಾಕ್ರಾಂತ–ಹೃದಯಃ, ಶೋಕೇನಾಕುಲಿತೇಂದ್ರಿಯಃ** – ಸ್ನೇಹದಿಂದ ಕೂಡಿ ನಮ್ಮೆಲ್ಲರನ್ನೂ ಹಿಂತಿರುಗಿ ಕರೆದುಕೊಂಡು ಹೋಗಲಷ್ಟೇ ಭರತನು ಕಾಡಿಗೆ ಬಂದಿರುವನೆಂದು, ತನ್ನ ತಮ್ಮನ ಹೃದಯವನ್ನು ಚೆನ್ನಾಗಿ ಅರಿತಿದ್ದ ರಾಮ ಲಕ್ಷ್ಮಣನಿಗೆ ದೃಢವಾಗಿ ತಿಳಿಸುತ್ತಾನೆ.

ಭರತನೊಡನೆ ಬಂದಿದ್ದ ಅನೇಕ ಋಷಿಗಳು ಮತ್ತು ಭರತ ಕೂಡ, "ದಶರಥ ಮೃತನಾಗಿರುವುದರಿಂದ ರಾಮ ಅಯೋಧ್ಯೆಗೆ ಹಿಂತಿರುಗಿ ರಾಜ್ಯ ಸ್ವೀಕರಿಸುವುದರಲ್ಲಿ ಯಾವ ದೋಷವೂ ಇಲ್ಲ, ಅಧರ್ಮವೂ ಇಲ್ಲ" ಎಂದು ಶಾಸ್ತ್ರ, ಸ್ಮೃತಿ ವಾಕ್ಯಗಳನ್ನು ಉದ್ಧರಿಸಿ ಪ್ರತಿಪಾದನೆ ಮಾಡುತ್ತಾರೆ. ಆದರೂ ರಾಮ, "ಆಡಿದ ಮಾತಿನಂತೆ ನಡೆಯುವುದೇ ಸರಿಯಾದುದು. ತಂದೆ ಇಲ್ಲವೆಂದು ಅದನ್ನು ಬದಲಾಯಿಸುವುದು ಯಾವುದೇ ರೀತಿಯಿಂದಲೂ ನ್ಯಾಯಬದ್ಧವಾಗುವುದಿಲ್ಲ" ಎಂದು ಅವರೆಲ್ಲರ ಕೋರಿಕೆಯನ್ನು ನಿರಾಕರಿಸುತ್ತಾನೆ. ರಾಮನ ಸತ್ಯಸಂಧತೆ ಎಂತಹುದು! ತಾನಾಗಿ ಕಾಲಿಗೆ ತೊಡರಿದ ಸುಖಭೋಗಗಳನ್ನು ಬೇಡ, ಬೇಡ ಎನ್ನುವ ಈ ಅಣ್ಣತಮ್ಮಂದಿರ ಹಿರಿಮೆ ಎಂತಹುದು!

ಕೊನೆಗೆ ತನ್ನ ಮೇಲೆ ಬಂದೊದಗಿದ ಕರ್ತವ್ಯಭಾರವನ್ನು ಭರತ ಹೊರಲೇಬೇಕಾಯಿತು. ಆದರೆ ರಾಮನ ಪಾದುಕೆಗಳನ್ನು ಸಿಂಹಾಸನದಲ್ಲಿರಿಸಿದ ಭರತ ರಾಮನಂತೆಯೇ ನಾರುಮಡಿಯುಟ್ಟು, ರಾಜ್ಯದ ಎಲ್ಲಾ ಸುಖಭೋಗಗಳನ್ನೂ ತ್ಯಜಿಸಿ, ವನವಾಸಿಯಂತೆಯೇ ಬಾಳುತ್ತ, ರಾಜ್ಯಭಾರದ ಕರ್ತವ್ಯ ನಿರ್ವಹಿಸಿದ. ಈ ಹಿನ್ನೆಲೆಯಲ್ಲಿ ಭರತನ ತ್ಯಾಗ ರಾಮನ ತ್ಯಾಗಕ್ಕಿಂತ ಒಂದು ಕೈ ಹೆಚ್ಚೆಂದೇ ಹೇಳಬಹುದು. ಇಂದ್ರಿಯಗಳನ್ನು ಸತತ ಸೆಳೆಯುವ ಚಿತ್ತಾಕರ್ಷಕ ಭೋಗಭಾಗ್ಯಗಳ ನಡುವೆ ಇದ್ದುಕೊಂಡೂ ಅವನು ಅವುಗಳ ಪ್ರಭಾವಕ್ಕೆ ಒಳಗಾಗಲಿಲ್ಲ. ಉಡುಗೊರೆಗಳು, ಕಪ್ಪ ಕಾಣಿಕೆಗಳು ಏನೇ ಬಂದರೂ ಅವೆಲ್ಲವನ್ನೂ ರಾಮನ ಪಾದುಕೆಗಳಿಗೆ ಸಮರ್ಪಿಸುತ್ತಿದ್ದ. ಯಾವುದೇ ವಿಧವಾದ ರಾಜ್ಯದ ಕೆಲಸ ನಿರ್ವಹಿಸಬೇಕಾಗಿದ್ದರೂ, ಅವೆಲ್ಲವನ್ನೂ ಅವನು ಆ ಪಾದುಕೆಗಳಿಗೆ ನಿವೇದಿಸಿಯೇ ನೆರವೇರಿಸುತ್ತಿದ್ದ. ಈ ರೀತಿಯಲ್ಲಿ ಭರತ ಲೌಕಿಕ ಕರ್ತವ್ಯವನ್ನೂ ಆಧ್ಯಾತ್ಮಿಕ ವಿರಕ್ತಿಯನ್ನೂ ಸಮನ್ವಯ ಮಾಡಿಕೊಂಡಿದ್ದ ರೀತಿ ಎಲ್ಲರಿಗೂ ಆದರಣೀಯವೂ ಅನುಕರಣೀಯವೂ ಆಗಿದೆ.

ರಾಮಲಕ್ಷ್ಮಣರು ಸೀತೆಯೊಡಗೂಡಿ ಚಿತ್ರಕೂಟದಲ್ಲಿ ಸಂಚರಿಸುತ್ತಿರುವಾಗ, ಸುತೀಕ್ಷ್ಣರೆಂಬ ಮುನಿಯನ್ನು ಮುಂದಿಟ್ಟುಕೊಂಡು ಋಷಿಗಳೆಲ್ಲರೂ ರಾಮನ ಬಳಿಗೆ ಬರುತ್ತಾರೆ. ರಾಕ್ಷಸರಿಂದ ಒದಗಿರುವ ಬಾಧೆಗಳನ್ನು ವಿವರಿಸಿ, ಅದರಿಂದ ತಮ್ಮನ್ನು ರಕ್ಷಿಸಬೇಕೆಂದು ಬೇಡಿಕೊಳ್ಳುತ್ತಾರೆ. ರಾಮ ಅವರ